ಹೀಗೆ ಹಾಡುತ್ತಾ ಕುಳಿತಿದ್ದವನನ್ನು ಅಣ್ಣ ದೇವರೆಡ್ಡಿ ಎಬ್ಬಿಸಿ ಹೊರಡಲು ಹೇಳಿದ. ದೇವರೆಡ್ಡಿ ಆಲವಟ್ಟದ ನರಸಿಂಹನಿಗೆ ಫೋನ್ ಮಾಡಿ ತಾವು ಹೊರಟಿರುವುದಾಗಿ ತಿಳಿಸಿ ಊರ ಗೇಟಿನ ಬಳಿ ಕಾಯಲು ಹೇಳಿದ. ಜೊತೆಗೆ ಮೂರು ಜನವಾದರೆ ಶಕುನ ಸರಿಹೋಗಲ್ಲ ಹಾಗಾಗಿ ಮತ್ತೊಬ್ಬರನ್ನು ಕರೆದುಕೊಳ್ಳುವಂತೆ ನರಸಿಂಹನಿಗೆ ತಿಳಿಸಿದ. ಅಲ್ಲಿಂದ ಅವರು ಎರಡು ಗಾಡಿಗಳಲ್ಲಿ ನೇರವಾಗಿ ಕೈವಾರಕ್ಕೆ ತೆರಳಿದರು. ಹುಡುಗಿ ಅಲೋಲಿಕೆಯ ವರ್ಣನೆಯ ಮಟ್ಟಕ್ಕೆ ಇಲ್ಲವಾದರೂ ಪರವಾಗಿಲ್ಲ ಎಂದು ಗಂಗಿರೆಡ್ಡಿಗೆ ಅನಿಸಿತು. ತುಸು ಕಪ್ಪು. ಆದರೇನು ತಾನೂ ಕಪ್ಪಲ್ಲವೆ ಎಂದುಕೊಂಡ. ಕೊಟ್ಟ ಒಂದಷ್ಟು ತಿಂಡಿ ತಿಂದು, ಟೀ ಕುಡಿದು ಮತ್ತೆ ನೇರ ಚಿಂತಾಮಣಿಗೆ ಬಂದರು. ಅಲ್ಲಿ ಪರಿಚಯದ ಅಂಗಡಿಯ ಬಳಿ ದೇವರೆಡ್ಡಿ ಮತ್ತು ನರಸಿಂಹ ಮಾತಿಗೆ ಕುಳಿತರು. ನರಸಿಂಹ, ಹುಡುಗಿ ಪರವಾಗಿಲ್ಲ ಆಗಬಹುದು ನೋಡಿ ಎಂದು ನುಡಿದ. ದೇವರೆಡ್ಡಿ, ಹುಡುಗಿಗೆ ಹತ್ತಿರತ್ತಿರ ನಲವತ್ತು ಆಗಿರುವ ಹಾಗೆ ಕಾಣ್ತಿದೆ, ಜೊತೆಗೆ ಕಪ್ಪು. ಬೇಡ ಬೇರೆ ಯಾವುದಾದರೂ ನೋಡು ಎಂಬಂತೆ ನುಡಿದ. ಅದಕ್ಕೆ ನರಸಿಂಹ 'ಗಂಗಿರೆಡ್ಡಿಗೂ ಐವತ್ತಾಗಿದೆ... ಯಿಂಗೇ ವಂಕ್ರ ಮತಾಡ್ತಾ ಹೋದ್ರೆ ಅವ್ನ ಪೆಳ್ಳಿ ಆದಂಗೆ. ಯೋಚ್ನೆ ಮಾಡಿ ತಿಳ್ಸು' ಎಂದು ನುಡಿದ. ಅದಕ್ಕೆ ತುಸು ಕೆರಳಿದ ದೇವರೆಡ್ಡಿ 'ಗಂಡ್ಸಿಗೆ ಎಂತಾ ವಯಸ್ಸಲಾ. ತಲೆ ನೆರೀತೂ ಅಂತ ಅದೂ ನೆರೆಯುತ್ತಾ? ಮುಸಲಿ ಜತೀಕೆ ಮದ್ವೆ ಮಾಡಕ್ಕೆ ಅವ್ನೇನು ಬೀದಿಗೆ ಬಿದ್ದವ್ನ. ನನ ತಮ್ಮ... ಅವ್ನು ಮದ್ವೆ ಆಗೋ ಪಡುಸು ಚಂದಕಿರಬೇಕು. ನೋಡ್ತಿರು ಎಂತಾ ಪಡುಸ್ನ ಹುಡುಕ್ತೀನಿ ಅಂತ. ನಿನ್ನ ಕೈನಾಗಾದ್ರೆ ನೀನೂ ಹುಡುಕು' ಎಂದು ನುಡಿದು ಗಂಗಿರೆಡ್ಡಿಯನ್ನು ಕರೆದುಕೊಂಡು ಅಲ್ಲಿಂದ ಹೊರಟುಬಿಟ್ಟ. ಮನೆಗೆ ಹೋದವನೆ ಗಂಗಿರೆಡ್ಡಿಗೆ 'ಎಂಗೋ' ಎಂದು ಕೇಳಿದ. ಗಂಗಿರೆಡ್ಡಿ 'ಪರವಾಗಿಲ್ಲ ಅನ್ಸುತ್ತೆ. ನೋಡಕ್ಕೆ ಅಂಗೆ ಕಾಣಿಸ್ತಿರಬೋದು' ಎಂದುತ್ತರಿಸಿದ. ಅದಕ್ಕೆ ದೇವರೆಡ್ಡಿ 'ನಿಂಕೆ ಗೊತ್ತಾಗಲ್ಲ ಸುಮ್ಕಿರು. ನೀನಿನ್ನೂ ಚಿಕ್ಕೋನು. ಅಲ್ಲಾಲೆ ನಲವತ್ತಾಗಿರೋಳ್ನ ಕಟ್ಕಂಡು ಮಕ್ಕಳ್ನ ಯಂಗ್ಲ ಮಾಡ್ಕೋತಿ. ಮದ್ವೆ ಆಗೋದೆ ಮಕ್ಕಳ್ನ ಹೆರಕ್ಕೆ ತಾನೆ. ನೀ ಸುಮ್ಕಿರು, ನಾ ಚಂದಕಿರೋ ಹುಡಗೀನ ನೋಡ್ತೀನಿ' ಎಂದು ಗದರಿಸಿ ಗಂಗಿರೆಡ್ಡಿಯನ್ನು ಸುಮ್ಮನಾಗಿಸಿದ. ಗಂಗಿರೆಡ್ಡಿಗೆ ತನ್ನ ಅಣ್ಣ ಹೇಳುತ್ತಿರುವುದೂ ಸರಿ ಇದೆಯಲ್ಲವೆ. ಅವನು ತನ್ನ ಒಳತಿಗಾಗೆ ಹೇಳುತ್ತಿದ್ದಾನಲ್ಲವೆ ಎಂದನಿಸಿತಾದ್ದರಿಂದ ಆಯ್ತು ಎನ್ನುವಂತೆ ತಲೆಯಾಡಿಸಿ 'ಬಾಲ ಶಿರೋಮಣಿಯೆ ನೀಲ ಮುತ್ತಿನ ಮಣಿಯೆ ಲೋಲ ಪುರುಷನು ಇವನು ನೋಡಮ್ಮ ತಾಯೇ... ಬತ್ತೀಸ ಕಳೆಯುಳ್ಳ ಪುರುಷ ನೋಡಿನ್ನೂ...' ಎಂದು ಹಾಡುತ್ತಾ ಆಚೆ ನಡೆದ.

ಅದಾದ ಮೇಲೆ ಮತ್ತೂ ಒಂದೆರಡು ಹೆಣ್ಣುಗಳನ್ನು ನೋಡಿದ್ದಾಯಿತು. ಒಬ್ಬಳದ್ದು ಮೆಳ್ಳಗಣ್ಣು ಎಂದು ತಿರಸ್ಕರಿಸಲ್ಪಟ್ಟರೆ, ಮತ್ತೊಬ್ಬಳು ತಾನು ಮುದುಕನನ್ನು ಮದುವೆಯಾಗಲಾರೆ ಎಂದು ಗಂಗಿರೆಡ್ಡಿಯನ್ನೇ ತಿರಸ್ಕರಿಸಿದ್ದು. ಊರಿನ ಮಂದಿಯೂ 'ಲೇ ನಿನ್ನ ಕನ್ಯಾರಾಶಿನಾಗೆ ಶನಿ ಬಂದು ಕೂತವ್ನೆ. ಅದುಕೆ ನಿಂಕೆ ಮದುವೆ ಆಗ್ತಿಲ್ಲ' ಎಂದು ರೇಗಿಸುವುದನ್ನು ಜಾಸ್ತಿ ಮಾಡಿದ್ದರು. ಹೀಗೆ ಮತ್ತೂ ಐದಾರು ತಿಂಗಳುಗಳು ಕಳೆದವು. ಊರ ಮಂದಿ ಗಂಗಿರೆಡ್ಡಿಗೆ ಮದುವೆಯ ವಿಷಯ ಹಿಡಿದು ರೇಗಿಸುತ್ತಿದ್ದರೆ ಅವನು ಊರ ಮನೆಗಳಲ್ಲಿನ ಎಲ್ಲಬಗೆಯ ಕಷ್ಟಗಳಿಗೂ ಶನಿಯೇ ಕಾರಣವೆಂದು ಏರುದನಿಯಲ್ಲೆ ನುಡಿಯುತ್ತಿದ್ದ. ಜೊತೆಗೆ ಶನಿಮಹಾತ್ಮೆ ಕಥೆ ಮಾಡಿಸ್ಬೇಕು, ಇಲ್ಲಾಂದ್ರೆ ಮತ್ತಷ್ಟು ಕಷ್ಟಗಳು ಬರುವುದಾಗಿ ಹೆದರಿಸುತ್ತಿದ್ದ. ಗಂಗಿರೆಡ್ಡಿಯ ಮಾತುಗಳನ್ನು ಊರಮಂದಿ ಪರಿಗಣಿಸದೆ ಸಾಗುವುದನ್ನು ಈ ಮೊದಲೆ ಕಲಿತುಬಿಟ್ಟಿದ್ದರು. 'ಪನಿಲ್ಲ ಪಂಗಿಲ್ಲ, ಮೂರೊತ್ತೂ ಇದ್ನೆ ಯೇಳಕಂಡು ತಿರುಗುತಾನೆ' ಎಂದು ಗೊಣಗಿಕೊಂಡೋ ಬೇಸರಿಸಿಕೊಂಡೋ ನಡೆದುಬಿಡುತ್ತಿದ್ದರು.

ಒಂದು ದಿವಸ ದೇವರೆಡ್ಡಿ ಬಿರಬಿರನೆ ಮನೆಯೊಳಗೆ ಬಂದವನೆ 'ಲೇ ಗಂಗ, ಈಟು ದಿನಕ್ಕೆ ಒಳ್ಳೇ ಮನುಷ್ಯ ಸಿಕ್ದ ನೋಡು. ಅವ್ನಾವ ವೋದ ಬಾಳಾ ಮಂದೀಗೆ ಮಂಚಿದಾಗ್ಯೆತಂತೆ. ದೋಷಾನ ಕರೆಕ್ಟಾಗಿ ಕಂಡಿಡಿದು ಪರ್‍ಯಾರ ಕೊಡ್ತಾನಂತೆ. ನಾವು ನಾಳೀಕೆ ವಲ್ತಾವ. ಲೇ ಇವಳೆ, ನಾಳೆ ಮುಂಜಾನಿಕೆಲ್ಲ ಬಿರ್‍ನೆ ಎದ್ದು ದೇವರ್‍ಕೆ ದೀಪ ಅಚ್ಚಿ ಗಂಗಿರೆಡ್ಡಿಗೆ ಮಂಚಿದಾಗ್ಲಿ ಅಂತ ಬೇಡ್ಕ' ಎಂದು ಗಂಗಿರೆಡ್ಡಿಗೂ ಹೆಂಡತಿಗೂ ಒಟ್ಟಿಗೆ ಹೇಳಿ ಮತ್ತೆ ಆಚೆ ನಡೆದುಬಿಟ್ಟ. ಗಂಗಿರೆಡ್ಡಿ